ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (372)133
ವಿಧಾನ ಸಭಾ ಸದಸ್ಯರ ಹೆಸರು : ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ
ಉತ್ತರಿಸಬೇಕಾದ ಸಚಿವರು : (ಶ್ರೀ ಬಸವರಾಜ್ ಬೊಮ್ಮಾಯಿ)
ಜಲಸಂಪನ್ಮೂಲ ಸಚಿವರು

ಅ) ಕಾರಂಜಾ ನೀರಾವರಿ ಯೋಜನೆಗಾಗಿ ಭಾಲ್ಕಿ ವಿಧಾನ ಸಭಾ ಕ್ಷೇತ್ರದ ಯಾವ ಯಾವ ಗ್ರಾಮಗಳಲ್ಲಿ ಎಷ್ಟು ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ;

ಭಾಲ್ಕಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಾರಂಜಾ ಯೋಜನೆಯಡಿ ಎಡದಂಡೆ ಮತ್ತು ಬಲದಂಡೆ ಕಾಲುವೆ ನಿರ್ಮಾಣಕ್ಕಾಗಿ ಒಟ್ಟು 36 ಗ್ರಾಮಗಳ ಒಟ್ಟು ವಿಸ್ತೀರ್ಣ 5507-04.00 ಎಕರೆ ಭೂಮಿ ಸ್ವಾಧೀನಪಡಿಸಿಕೊಳ್ಳಲಾಗಿದೆ. ಕಮಲಾಪೂರ ಗ್ರಾಮದ ಮುಳುಗಡೆ ಪ್ರದೇಶಕ್ಕಾಗಿ 968-00 ಎಕರೆ ಭೂಮಿ ಸ್ವಾಧೀನ ಪಡಿಸಿಕೊಳ್ಳಲಾಗಿದೆ.

ಆ) ಇದಕ್ಕಾಗಿ ಈವರೆಗೆ ಎಷ್ಟು ಜನರಿಗೆ ಎಷ್ಟು ಮೊತ್ತದ ಪರಿಹಾರವನ್ನು ನೀಡಲಾಗಿದೆ.

ಇದಕ್ಕಾಗಿ ಸುಮಾರು 670 ಭೂಮಾಲಿಕರಿಗೆ (ಎಡದಂಡೆ ಮತ್ತು ಬಲದಂಡೆ ಕಾಲುವೆ ಮತ್ತು ಮುಳುಗಡೆ) ಅಣೆಕಟ್ಟು ಮತ್ತು ಕಾಲುವೆ ನಿರ್ಮಾಣಕ್ಕಾಗಿ ರೂ.1423.17 ಲಕ್ಷ ಪರಿಹಾರ ಧನ ಪಾವತಿಸಲಾಗಿದೆ. ಮತ್ತು ಭೂ-ಸ್ವಾಧೀನ ಕಾಯ್ದೆ ಕಲಂ 11(ಎ) ರಡಿ ಪರಿಹಾರ ಪಡೆದುಕೊಂಡು ಹೆಚ್ಚಿನ ಪರಿಹಾರ ಧನ ಕೋರಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುವ ಭೂಹಿಡುವಳಿದಾರರಿಗೆ ನ್ಯಾಯಾಲಯದ ಆದೇಶದಂತೆ ರೂ.2800.00 ಲಕ್ಷ (28.00 ಕೋಟಿ) ಪರಿಹಾರ ಧನ ಹೀಗೆ ಒಟ್ಟು ರೂ.42.23 ಕೋಟಿ ಪರಿಹಾರ ಧನ ಪಾವತಿಸಲಾಗಿದೆ.

ಇ) ಉದ್ಯೋಗವನ್ನು ಕಲ್ಪಿಸಲಾಗಿರುವ ಜನರೆಷ್ಟು;

ಈ ಇಲಾಖೆಯಿಂದ ಯೋಜನೆಯ ನಿರಾಶ್ರಿತರು ಎಂಬ ಬಗ್ಗೆ ದೃಢೀಕರಿಸಲಾಗುತ್ತಿದ್ದು, ಇದನ್ನು ಆದರಿಸಿ ದೃಢೀಕರಣ ಪತ್ರವನ್ನು ಕಂದಾಯ ಇಲಾಖೆಯಿಂದ ನೀಡಲಾಗುತ್ತಿದ್ದು, ಉದ್ಯೋಗ ಕಲ್ಪಿಸಲಾಗಿರುವ ಬಗ್ಗೆ ಈ ಇಲಾಖೆಯಲ್ಲಿ ಮಾಹಿತಿ ಲಭ್ಯವಿರುವುದಿಲ್ಲ.

ಈ) ಯಾವ ಯಾವ ಸ್ಥಳಗಳಲ್ಲಿ ಪುನರ್ ವಸತಿ ಕಲ್ಪಿಸಿ, ಈ ಸ್ಥಳಗಳಲ್ಲಿ ಯಾವ ಯಾವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ಇದಕ್ಕಾಗಿ ವೆಚ್ಚ ಮಾಡಲಾದ ಹಣವೆಷ್ಟು;

ಕಾರಂಜಾ ಯೋಜನೆ ಜಲಾಶಯದಲ್ಲಿ ಭಾಲ್ಕಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಕಮಲಾಪೂರ ಗ್ರಾಮವು ಪೂರ್ತಿಯಾಗಿ ಮುಳುಗಡೆಯಾಗಿದ್ದು ಈ ಗ್ರಾಮವನ್ನು ಬೀದರ (ದಕ್ಷಿಣ) ಕ್ಷೇತ್ರದ ನಿಜಾಮಪೂರದಲ್ಲಿ ಪುನರ್ವಸತಿಗೊಳಿಸಲಾಗಿದೆ. ಸದರಿ ಪುನರ್‌ವಸತಿ ಕೇಂದ್ರದಲ್ಲಿ ಪುನರ್‌ವಸತಿ ಹಾಗೂ ಪುನರ್‌ನಿರ್ಮಾಣ ಕಾಯ್ದೆಯಡಿಯಲ್ಲಿ ಹಾಗೂ ಕೇಂದ್ರ ಜಲ ಆಯೋಗದ ನಿಯಮಗಳನ್ವಯ ಎಲ್ಲಾ ಮೂಲ ಭೂತ ಸೌಕರ್ಯಗಳಾದ ಕೂಡು ರಸ್ತೆ, ಆಂತರಿಕ ರಸ್ತೆ, ಸಾರ್ವಜನಿಕ ಕಟ್ಟಡಗಳು, ಕಾರ್ಮಿಕ ಕಟ್ಟಡಗಳು ನೀರು ಸರಬರಾಜು, ವಿದ್ಯುತ್ ಪೂರೈಕೆ ಮತ್ತು ಸ್ಮಶಾನ ಭೂಮಿಗಳನ್ನು ಒದಗಿಸಿ, ಜಿಲ್ಲಾ ಪಂಚಾಯತ್ ವಶಕ್ಕೆ ದಿನಾಂಕ:19–5–2000ರಂದು ಹಸ್ತಾಂತರಿಸಲಾಗಿದ್ದು, ಕಳೆದ ಮೂರು ವರ್ಷಗಳಲ್ಲಿ ಯಾವುದೇ ವೆಚ್ಚ ಮಾಡಿರುವುದಿಲ್ಲ.

ಊ) ಇನ್ನು ಎಷ್ಟು ಪ್ರಕರಣಗಳಲ್ಲಿ ಪರಿಹಾರ ಧನವನ್ನು ವಿತರಣೆ ಮಾಡಬೇಕಾಗಿದೆ?

ಇನ್ನು ಅಂದಾಜು (39) ಪ್ರಕರಣಗಳಲ್ಲಿ ಪರಿಹಾರ ಧನ ಪಾವತಿಸುವುದು ಬಾಕಿ ಇರುತ್ತದೆ. ಇದಕ್ಕಾಗಿ ಅಂದಾಜು ರೂ.2.11 ಕೋಟಿಗಳ ಪರಿಹಾರ ಧನ ಪಾವತಿಸಬೇಕಾಗಿರುತ್ತದೆ.

ಊ) ಈ ಪ್ರಕರಣಗಳು ಎಷ್ಟು ದಿನಗಳಿಂದ ಬಾಕಿ ಇವೆ; ಹಾಗಿದ್ದಲ್ಲಿ, ಇವರುಗಳಿಗೆ ಪರಿಹಾರ ಧನವನ್ನು ಯಾವಾಗ ವಿತರಿಸಲಾಗುವುದು ವಿಳಂಬಕ್ಕೆ ಕಾರಣಗಳೇನು?

ಈ ಪ್ರಕರಣಗಳು ಸುಮಾರು ಒಂದು ವರ್ಷದಿಂದ ಬಾಕಿ ಇದ್ದು 4(1) ಮತ್ತು 6(1)ರ ಅಧಿಸೂಚನೆ ಹೊರಡಿಸುವ ಹಂತದಲ್ಲಿದ್ದು, ಭೂಸ್ವಾಧೀನ ಕಾಯ್ದೆ ಅನುಸಾರ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಲು ಅಂದಾಜು ಎರಡು ವರ್ಷ ಅವಧಿ ನಿಗದಿಪಡಿಸಲಾಗಿದ್ದು, ಪ್ರಕ್ರಿಯೆ ಪೂರ್ಣಗೊಳಿಸಿ ಪರಿಹಾರ ಧನ ಪಾವತಿಸಲು ಸೂಕ್ತ ಕ್ರಮ ಜರುಗಿಸಲಾಗುವುದು.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**:**	**(373)134**
2. ಸದಸ್ಯರ ಹೆಸರು	**:**	**ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)**
3. ಉತ್ತರಿಸುವ ಸಚಿವರು	**:**	**ಮಾನ್ಯ ಸಣ್ಣ ಕೈಗಾರಿಕಾ ಮತ್ತು ರೇಷ್ಮೆ ಇಲಾಖೆ ಸಚಿವರು (ಶ್ರೀ ವೆಂಕಟ ರಮಣಪ್ಪ)**